# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 27–09–2013ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಎಸ್.ಶಶಿರೇಖಾಜಯರಾಮ್ | ಅಧ್ಯಕ್ಷರು | ಜಂಟಿ ಆಯುಕ್ತರು (ಆರೋಗ್ಯ/ಘನತ್ಯಾಜ್ಯ) |
| ಜಿ.ಮಂಜುನಾಥರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ವಿ.ವಾಗೀಶ್ | ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು |
| ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | |
| ಕೆ.ಚಂದ್ರಶೇಖರ್ | ಸದಸ್ಯರು | |
| ಎಲ್.ನಾಗರತ್ನಲೋಕೇಶ್ | ಸದಸ್ಯರು | |
| ಕವಿತಾಬಾಬುರಾಜ್ | ಸದಸ್ಯರು | |
| ಪಿ.ಎಂ.ಸರೋಜ | ಸದಸ್ಯರು | |
| ಕೆ.ಶಿವಕುಮಾರ್ | ಸದಸ್ಯರು | |

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/01/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ 25-07-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.08ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007 ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಮುಂದುವರೆದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ತ್ಯಾಜ್ಯವು ಪೂರ್ಣವಾಗಿ ಸಂಸ್ಕರಣೆಯಾಗುತ್ತಿರುವುದಿಲ್ಲವೆಂದು ಹಾಗೂ ಲೀಚೆಟ್ ಅನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಮಾವಳ್ಳಿಪುರ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ದಿನಾಂಕ: 12-07-2012 ರಿಂದ ಸದರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತಯ್ಯ ಉಂಟಾಗಿ ತ್ಯಾಜ್ಯ ವಿಲೇವಾರಿಯು ಒಂದು ಸಮಸ್ಯೆಯಾಗಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು ದಿನಾಂಕ: 22-08-2012 ರಂದು ಪಾಲಿಕೆಯ ಸಭಾಂಗಣದಲ್ಲಿ ಪೂಜ್ಯ ಮಹಾಪೌರರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಯಲಹಂಕ ಕ್ಷೇತ್ರದ ಶಾಸಕರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸೂಕ್ತವಾಗಿ ಅಭಿವೃದ್ಧಿಗೊಳಿಸಿ ಪುನರಾರಂಭಿಸಲು ಹಾಗೂ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.800.00 ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ.

S Shelh...

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

-2

ಅದರಂತೆ ವಿಷಯ ಸಂಖ್ಯೆ: 230/2012-13 ದಿನಾಂಕ: 30-08-2012 ರಲ್ಲಿ ಪಾಲಿಕೆಯ ಸಭೆಯಲ್ಲಿ ನಿರ್ಣಯವೊಂದನ್ನು ಕೈಗೊಂಡು ದಿನಾಂಕ: 22-08-2012 ರ ಮಾನ್ಯ ಉಪ ಮುಖ್ಯ ಮಂತ್ರಿಗಳು ಸೂಚಿಸಿದಂತೆ ರೂ.೮೦೦.೦೦ ಲಕ್ಷಗಳ ಅನುದಾನ ಒದಗಿಸಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಮೇಲೆ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಮಾವಳ್ಳಿಪುರ ಘಟಕದ ಸುತ್ತಲಿನ ಗ್ರಾಮಗಳ ವ್ಯಾಪ್ತಿಯನ್ನೊಳಗೊಂಡ ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಒಟ್ಟು ರೂ.೮೦೦.೦೦ ಲಕ್ಷಗಳ ಹದಿಮೂರು ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಯನ್ನು ಪಾಲಿಕೆಗೆ ನೀಡಿರುತ್ತಾರೆ. ಸದರಿ ಕಾಮಗಾರಿಗಳು ಹಾಗೂ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಒಟ್ಟು 12 (ಹನ್ನೆರೆಡು) ಕಾಮಗಾರಿಗಳ ರೂ.೮೨೯.೦೦ ಲಕ್ಷಗಳ ಪ್ರಸ್ತಾವನೆಯನ್ನು ತಯಾರಿಸಿ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ, ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆದು ಪ್ರಕ್ರಿಯೆ ನಡೆಸಲಾಗಿರುತ್ತದೆ.

ಸದರಿ ಕಾಮಗಾರಿಗಳ ಪಟ್ಟಿಯ ಕ್ರಮ ಸಂಖ್ಯೆ: (5) ರಲ್ಲಿ ಉಲ್ಲೇಖಿತ ಕಾಮಗಾರಿಯು ರೂ.೯೬.೦೦ ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸೇರ್ಪಡೆಗೊಂಡಿರುತ್ತದೆ. ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಕೈಗೊಳ್ಳಬೇಕಾದ 12 (ಹನ್ನೆರೆಡು) ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ, ಕಾಮಗಾರಿ ಸಂಖ್ಯೆ ಪಡೆಯಲು ಅನುಮೋದನೆ ಹಾಗೂ ಈಗಾಗಲೇ ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: ಸಾಆಸ್ಥಾಸ/84/2012-13 ದಿನಾಂಕ: 19-02-2013 ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ಪ್ರಥಮ ಬಾರಿಗೆ (Call-1) ಅಲ್ಪಾವಧಿ ಟೆಂಡರ್ ಕರೆದು ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

- ಟೆಂಡರ್ ಅಧಿಸೂಚನೆ ಸಂಖ್ಯೆ: EE-3/SWM/Tend/03/2012-13 dated: 03-12-2012
- ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 13-12-2012.
- ತಾಂತ್ರಿಕ ಬಿಡ್‌ಅನ್ನು ತೆರೆಯಲು ನಿಗಧಿಪಡಿಸಿದ ದಿನಾಂಕ: 15-12-2012.

ಸದರಿ ಟೆಂಡರ್ ಪ್ರಕಟಣೆಯನ್ನು ಕನ್ನಡ ದಿನಪತ್ರಿಕೆ ಹೊಸ ದಿಗಂತ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಗಳಲ್ಲಿ ದಿನಾಂಕ: 05-12-2012 ರಂದು ಪ್ರಕಟಿಸಲಾಗಿರುತ್ತದೆ.

ಒಂದನೇ ಕರೆಯ ಟೆಂಡರ್‌ನಲ್ಲಿ ಯಾವ ಬಿಡ್ಡುದಾರರು ಭಾಗವಹಿಸದೆ ಇದ್ದುದರಿಂದ, ಟೆಂಡರ್ ರದ್ದುಗೊಳಿಸಿ ಎರಡನೇ ಕರೆಯ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

- ಟೆಂಡರ್ ಅಧಿಸೂಚನೆ ಸಂಖ್ಯೆ: EE-3/SWM/Tend/03/2012-13 call-2 dated: 07-01-2013
- ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 21-01-2013.
- ತಾಂತ್ರಿಕ ಬಿಡ್‌ಅನ್ನು ತೆರೆಯಲು ನಿಗಧಿಪಡಿಸಿದ ದಿನಾಂಕ: 23-01-2013.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಟೆಂಡರ್ ಪ್ರಕಟಣೆಯನ್ನು ಕನ್ನಡ ಪ್ರಭ ದಿನಪತ್ರಿಕೆ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಗಳಲ್ಲಿ ದಿನಾಂಕ: 09-01-2013 ರಂದು ಪ್ರಕಟಿಸಲಾಗಿರುತ್ತದೆ.

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಗಿನಂತಿರುತ್ತವೆ.

- ಅಂದಾಜು ಮೊತ್ತ - ರೂ.233.00 ಲಕ್ಷಗಳು
- ಆಡಳಿತಾತ್ಮಕ ಮಂಜೂರಾತಿ ಸಂ - ಮು.ಅ./ಫ.ತ್ಯಾ.ನಿ-1/ಆ.ಮಂ./64/2012-13 ದಿನಾಂಕ: 26-11-2012
- ತಾಂತ್ರಿಕ ಮಂಜೂರಾತಿ ಸಂ. - ಮು.ಅ./ಫ.ತ್ಯಾ.ನಿ-1/ತಾಂ.ಮಂ/62/2012-13 ದಿನಾಂಕ: 26-11-2012
- ಭದ್ರತಾ ಠೇವಣಿ ಮೊತ್ತ - ರೂ.3,49,,500.00
- ಟೆಂಡರ್‌ಗಿಟ್ಟ ಮೊತ್ತ - ರೂ.232,91,476.41

ಸದರಿ ಎರಡನೇ ಕರೆಯ ಅಲ್ಪಾವಧಿ ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ: 23-01-2013 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆಯಲಾಗಿದ್ದು, (1) ಮೆ॥ ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ಗುತ್ತಿಗೆದಾರರು, (2) ಶ್ರೀ.ವಿ.ಎಲ್.ಮುನಿರಾಜು, 1ನೇ ದರ್ಜೆ ಗುತ್ತಿಗೆದಾರರು ಮತ್ತು (3) ಶ್ರೀ ಸಿ.ಜಿ.ಚಂದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರು ಒಟ್ಟು ಮೂವರು ಬಿಡ್ಡುದಾರರು ಭಾಗವಹಿಸಿರುತ್ತಾರೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಅನ್ನು ತೆರೆದು ಪರಿಶೀಲಿಸಲಾಗಿ, ಮೂವರು ಬಿಡ್ಡುದಾರರು ಎಲ್ಲಾ ತಾಂತ್ರಿಕ ಷರತ್ತುಗಳನ್ನು ಪೂರೈಸಿರುತ್ತಾರೆ. ಬಿಡ್ಡುದಾರರು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾಗಿರುವ ಹಿನ್ನೆಲೆಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಸದರಿಯವರ ಆರ್ಥಿಕ ಬಿಡ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 13-02-2013 ರಂದು ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

| ಕ್ರ.ಸಂ. | ಬಿಡ್ಡುದಾರರ ಹೆಸರು | ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಮಂಜೂರಾದ ಅಂದಾಜು ಪಟ್ಟಿ ಮೊತ್ತಕ್ಕೆ (232,91,476.41) ಹೋಲಿಸಿದಲ್ಲಿ ಶೇಕಡವಾರು ಹೆಚ್ಚು/ಕಡಿಮೆ | CSR 2012-13 ನೇ ಸಾಲಿನ ದರಗಳ ಮೊತ್ತಕ್ಕೆ (238,10,959.80) ಹೋಲಿಸಿದಲ್ಲಿ ಶೇಕಡವಾರು ಹೆಚ್ಚು/ಕಡಿಮೆ |
|---|---|---|---|---|
| 1 | ಮೆ॥ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ಗುತ್ತಿಗೆದಾರರು | 222,70,130-00 | 4.39 (ಕಡಿಮೆ) | 6.47 (ಕಡಿಮೆ) |
| 2 | ಶ್ರೀ. ವಿ.ಎಲ್.ಮುನಿರಾಜು, 1ನೇ ದರ್ಜೆ ಗುತ್ತಿಗೆದಾರರು | 225,36,443.75 | 3.24 (ಕಡಿಮೆ) | 5.35 (ಕಡಿಮೆ) |
| 3 | ಶ್ರೀ. ಸಿ.ಜಿ.ಚಂದ್ರಪ್ಪ 1ನೇ ದರ್ಜೆ ಗುತ್ತಿಗೆದಾರರು | 244,50,274.75 | 4.98(ಹೆಚ್ಚು) | 2.68(ಹೆಚ್ಚು) |

ಮೇಲಿನಂತೆ ಸದರಿ ಟೆಂಡರ್‌ನ ಆರ್ಥಿಕ ಬಿಡ್‌ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನ ಸಮುಚಿತ ಮಾರ್ಗದಲ್ಲಿ ಸಲ್ಲಿಸಲಾಗಿದ್ದು, ಭಾಗವಹಿಸಿರುವ ಮೂವರು ಬಿಡ್ಡುದಾರರ ಪೈಕಿ ಮೆ॥ ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ಗುತ್ತಿಗೆದಾರರು ಎಲ್ಲಾ ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು, ಅರ್ಹ L1 ಬಿಡ್ಡುದಾರರಾಗಿರುವ ಹಿನ್ನೆಲೆಯಲ್ಲಿ, ಸದರಿಯವರ ಆರ್ಥಿಕ ಬಿಡ್‌ಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

S Shekh...

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಇಬ್ಬರು ಬಿಡ್ಡುದಾರರ ಪೈಕಿ ಅರ್ಹ L1 ಗುತ್ತಿಗೆದಾರರಾದ ಮೆ॥ ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ರವರ ಮೊತ್ತ ರೂ. 222,70,130-00 (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಲ್ಲಿ ಶೇ.6.47 ಕಡಿಮೆ) ಗಳ ಟೆಂಡರ್‌ಗೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ಚರ್ಚಿಸಲಾಯಿತು. ಮಾಹಿತಿಗಾಗಿ ಮುಂದೂಡಿದೆ

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/02/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ 24-05-13ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 4,500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ತ್ಯಾಜ್ಯವನ್ನು ಹಿಂದೆ ಮಾವಳ್ಳಿಪುರ, ಚೀಮಸಂದ್ರ, ಸುಬ್ಬರಾಯನಪಾಳ್ಯ, ಅಂಜನಪುರ, ಕಲ್ಲುಗಣಿ, ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ (ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್), ಮಂಡೂರು (ಉತ್ತರ) ಮತ್ತು ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

ಚೀಮಸಂದ್ರ ಮತ್ತು ಅಂಜನಪುರ, ಕಲ್ಲುಗಣಿ ಘಟಕಗಳು ತುಂಬಿದ ಹಿನ್ನೆಲೆಯಲ್ಲಿ ಈ ಘಟಕಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಸ್ಥಳೀಯರ ಪ್ರತಿಭಟನೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಮಾವಳ್ಳಿಪುರ ಮತ್ತು ಸುಬ್ಬರಾಯನಪಾಳ್ಯ ಘಟಕಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿರುತ್ತದೆ. ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಘಟಕದಲ್ಲೂ ಸಹ ಸ್ಥಳೀಯರ ಪ್ರತಿಭಟನೆಯಿಂದಾಗಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿತ್ತು. ಆದರೆ ಇತ್ತೀಚಿಗೆ ಕಳೆದ ಎರಡು ತಿಂಗಳಿನಿಂದ ಸದರಿ ಘಟಕದಲ್ಲಿ ಪ್ರತಿದಿನ ಸುಮಾರು 200-250 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಹಾಗೂ ಉಳಿಕೆ ತ್ಯಾಜ್ಯವನ್ನು ಮಂಡೂರು (ಉತ್ತರ), ಮಂಡೂರು (ದಕ್ಷಿಣ) ಮತ್ತು ಎಸ್.ಬಿಂಗಿಪುರ ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಘಟಕಗಳ ಮೇಲೆ ಒತ್ತಡ ಹೆಚ್ಚಾಗಿದ್ದು, ಬೆಂಗಳೂರು ನಗರದ ತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಈ ಬಗ್ಗೆ ಶ್ರೀ.ಮೋಹನ್ ಕುಮಾರ್ ಎಂಬುವರು W.P. ನಂ.30450/12 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಸದರಿ ದಾವೆ ವಿಚಾರಣೆಯನ್ನು ನಡೆಸುತ್ತಿದ್ದು, ವಿಚಾರಣೆ ವೇಳೆಯಲ್ಲಿ ಬೆಂಗಳೂರು ನಗರದ ಸುತ್ತಲಿನ ಕನಿಷ್ಠ ಏಳು ಸ್ಥಳಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ನಿರ್ದೇಶನ ನೀಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಿಲೇವಾರಿ/ಸಂಸ್ಕರಣೆಗಾಗಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ, ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 85 ರ 29-03 (ಎಕರೆ-ಗುಂಟೆ) ಮತ್ತು ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 48 ರ 07-31 (ಎಕರೆ-ಗುಂಟೆ) ಪ್ರದೇಶದ ಜಮೀನನ್ನು ಪಾಲಿಕೆಗೆ ಸರ್ಕಾರವು ಹಸ್ತಾಂತರಿಸಲಾಗಿರುತ್ತದೆ.

ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 85ರ 29-03 (ಎಕರೆ-ಗುಂಟೆ) ಜಮೀನಿನಲ್ಲಿ ಈಗಾಗಲೇ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು DBFOT ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಮುಂದುವರೆದಂತೆ, ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 48 ರಲ್ಲಿ, ಹೆಚ್ಚು ಘನತ್ಯಾಜ್ಯ ಉತ್ಪತ್ತಿಯಾಗುವ (Bulk generator) ಹೋಟೆಲ್, ರೆಸ್ಟೋರೆಂಟ್, ಕಲ್ಯಾಣ ಮಂಟಪ, ಮಾಲ್, ವಾಣಿಜ್ಯ ಸಂಕೀರ್ಣ, ದೇವಸ್ಥಾನ,

-5

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಪಾರ್ಟ್‌ಮೆಂಟ್, ಸಾರ್ವಜನಿಕರ ಕಛೇರಿಗಳು, ರೈಲು ನಿಲ್ದಾಣ, ಬಸ್ ನಿಲ್ದಾಣ ಇತ್ಯಾದಿಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೀಗೆಹಳ್ಳಿಯ ಪಾಲಿಕೆಯ ಜಾಗದಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಲು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ-2 ರವರ ಕಛೇರಿಯಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಘಟಕಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಕಾಂಪೌಂಡ್ ಗೋಡೆ, ರಸ್ತೆಗಳ ನಿರ್ಮಾಣ, ಕಛೇರಿ ಕಟ್ಟಡ, ಸೆಕ್ಯೂರಿಟಿ ರೂಮ್, ವೇ ಬ್ರಿಡ್ಜ್ ಹಾಗೂ ಕಾಂಪೌಂಡ್ ಸುತ್ತಲೂ ಗಿಡ ನೆಡುವುದು, ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಸದರಿ ಕಾಮಗಾರಿಗೆ ಸ್ಥಳಗಳನ್ನು ಪರಿಶೀಲಿಸಿ ಸ್ಥಳದ ಅವಶ್ಯಕತೆಗನುಗುಣವಾಗಿ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2012-13 ನೇ ಸಾಲಿನ ದರಪಟ್ಟಿಗಳ/ಮಾರುಕಟ್ಟೆಗಳ ದರಗಳನ್ವಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು ಅಂದಾಜು ಮೊತ್ತವು ರೂ.407.50 ಲಕ್ಷಗಳಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಕೆಳಗಿನಂತೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ0935 Approach roads ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

**ನಿರ್ಣಯ:-** ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು, ಸದರಿ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿರುವುದಾಗಿ ಅಧಿಕಾರಿಗಳು ತಿಳಿಸಿದ ಮೇರೆಗೆ, 15 ದಿನಗಳ ಒಳಗೆ ಮುಂದುವರೆದ ಟಿಪ್ಪಣಿಯೊಂದಿಗೆ ಟೆಂಡರ್ ಅನುಮೋದನೆ ಕಡತವನ್ನು ಸಮಿತಿಗೆ ಮಂಡಿಸಲು ಅಧಿಕಾರಿಗಳಿಗೆ ಸೂಚಿಸಿ, ವಿಷಯವನ್ನು ಮುಂದೂಡಲಾಯಿತು.

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/03/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು)ರವರ ದಿನಾಂಕ 24-5-2013ರಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 4,500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ತ್ಯಾಜ್ಯವನ್ನು ಹಿಂದೆ ಮಾವಳ್ಳಿಪುರ, ಚೀಮಸಂದ್ರ, ಸುಬ್ಬರಾಯನಪಾಳ್ಯ, ಅಂಜನಪುರ, ಕಲ್ಲುಗಣಿ, ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ (ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್), ಮಂಡೂರು (ಉತ್ತರ) ಮತ್ತು ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

ಚೀಮಸಂದ್ರ ಮತ್ತು ಅಂಜನಪುರ, ಕಲ್ಲುಗಣಿ ಘಟಕಗಳು ತುಂಬಿದ ಹಿನ್ನೆಲೆಯಲ್ಲಿ ಈ ಘಟಕಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಸ್ಥಳೀಯರ ಪ್ರತಿಭಟನೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಮಾವಳ್ಳಿಪುರ ಮತ್ತು ಸುಬ್ಬರಾಯನಪಾಳ್ಯ ಘಟಕಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿರುತ್ತದೆ. ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಘಟಕದಲ್ಲೂ ಸಹ ಸ್ಥಳೀಯರ ಪ್ರತಿಭಟನೆಯಿಂದಾಗಿ ತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸಲಾಗಿತ್ತು. ಆದರೆ ಇತ್ತೀಚಿಗೆ ಕಳೆದ ಎರಡು ತಿಂಗಳಿನಿಂದ ಸದರಿ ಘಟಕದಲ್ಲಿ ಪ್ರತಿದಿನ ಸುಮಾರು 200-250 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಹಾಗೂ ಉಳಿಕೆ ತ್ಯಾಜ್ಯವನ್ನು ಮಂಡೂರು (ಉತ್ತರ), ಮಂಡೂರು (ದಕ್ಷಿಣ) ಮತ್ತು ಎಸ್.ಬಿಂಗಿಪುರ ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಘಟಕಗಳ ಮೇಲೆ ಒತ್ತಡ ಹೆಚ್ಚಾಗಿದ್ದು, ಬೆಂಗಳೂರು ನಗರದ ತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಈ ಬಗ್ಗೆ ಶ್ರೀ.ಮೋಹನ್ ಕುಮಾರ್ ಎಂಬುವರು W.P. ನಂ.30450/12 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

S Shobha ...

ಅಧ್ಯಕ್ಷರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯ ಉಚ್ಚ ನ್ಯಾಯಾಲಯವು ಸದರಿ ದಾವೆ ವಿಚಾರಣೆಯನ್ನು ನಡೆಸುತ್ತಿದ್ದು, ವಿಚಾರಣೆ ವೇಳೆಯಲ್ಲಿ ಬೆಂಗಳೂರು ನಗರದ ಸುತ್ತಲಿನ ಕನಿಷ್ಠ ಏಳು ಸ್ಥಳಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ನಿರ್ದೇಶನ ನೀಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಿಲೇವಾರಿ/ಸಂಸ್ಕರಣೆಗಾಗಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ, ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85 ರ 29-03 (ಎಕರೆ-ಗುಂಟೆ) ಮತ್ತು ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 48 ರ 07-31 (ಎಕರೆ-ಗುಂಟೆ) ಪ್ರದೇಶದ ಜಮೀನನ್ನು ಪಾಲಿಕೆಗೆ ಸರ್ಕಾರವು ಹಸ್ತಾಂತರಿಸಲಾಗಿರುತ್ತದೆ.

ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85ರ 29-03 (ಎಕರೆ-ಗುಂಟೆ) ಜಮೀನಿನಲ್ಲಿ ಈಗಾಗಲೇ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು DBFOT ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಮುಂದುವರೆದಂತೆ, ಸೀಗೆಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 48 ರಲ್ಲಿ, ಹೆಚ್ಚು ಘನತ್ಯಾಜ್ಯ ಉತ್ಪತ್ತಿಯಾಗುವ (Bulk generator) ಹೋಟೆಲ್, ರೆಸ್ಟೋರೆಂಟ್, ಕಲ್ಯಾಣ ಮಂಟಪ, ಮಾಲ್, ವಾಣಿಜ್ಯ ಸಂಕೀರ್ಣ, ದೇವಸ್ಥಾನ, ಅಪಾರ್ಟ್‌ಮೆಂಟ್, ಸಾರ್ವಜನಿಕರ ಕಛೇರಿಗಳು, ರೈಲು ನಿಲ್ದಾಣ, ಬಸ್ ನಿಲ್ದಾಣ ಇತ್ಯಾದಿಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೀಗೆಹಳ್ಳಿಯ ಪಾಲಿಕೆಯ ಜಾಗದಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಲು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ-2 ರವರ ಕಛೇರಿಯಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಘಟಕಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಕಾಂಪೌಂಡ್ ಗೋಡೆ, ರಸ್ತೆಗಳ ನಿರ್ಮಾಣ, ಕಛೇರಿ ಕಟ್ಟಡ, ಸೆಕ್ಯೂರಿಟಿ ರೂಮ್, ವೇ ಬ್ರಿಡ್ಜ್ ಹಾಗೂ ಕಾಂಪೌಂಡ್ ಸುತ್ತಲೂ ಗಿಡ ನೆಡುವುದು, ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಪ್ರಸ್ತಾಪಿತ ಕೆಳಗಿನ ಕ್ರಮ ಸಂಖ್ಯೆ (1) ರಿಂದ (6) ರವರೆಗೆ ಕಾಮಗಾರಿ ಸ್ಥಳಗಳನ್ನು ಪರಿಶೀಲಿಸಿ ಸ್ಥಳದ ಅವಶ್ಯಕರೆಗೆನುಗುಣವಾಗಿ ಅಂದಾಜು ಪಟ್ಟಿಗಳನ್ನು ಲೋಕೋಪಯೋಗಿ ಇಲಾಖೆಯ 2012-13ನೇ ಸಾಲಿನ ದರಪಟ್ಟಿಗಳ/ಮಾರುಕಟ್ಟೆಗಳ ದರಗಳನ್ವಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು ವಿವರಗಳು, ಈ ಕೆಳಕಂಡಂತಿವೆ.

| Sl. No. | Name of the work | Estimated Amount Rs. in Lakhs |
|---|---|---|
| 1 | Improvements and Asphalting to Kannahalli main road from Magadi main road to Seegehalli landfill site. | 407.50 |
| 2 | Improvements and Asphalting to Kannahalli main road from Seegehalli landfill site to Kannahalli landfill site. | 193.30 |
| 3 | Construction of Compound wall (Balance portion) to sanitary landfill site at Sy. No.48, Seegehalli village. | 34.00 |
| 4 | Providing & Construction of Internal roads, office building, security room, toilet and weight bridge to sanitary landfill site at Sy. No.48, Seegehalli village. | 80.80 |
| 5 | Providing and plantation of plant for green belt to sanitary landfill site at Sy. No.48, Seegehalli village. | 4.04 |
| 6 | Providing for a awareness campaign to public regarding sanitary landfill site at Sy. No.48, Seegehalli village. | 10.00 |
| | **Total Estimated Amount** | **729.64** |

ಒಟ್ಟಾರೆ 6 ಕಾಮಗಾರಿಗಳಲ್ಲಿ ಮೇಲ್ಕಂಡ ಕ್ರಮ ಸಂಖ್ಯೆ.3, 5 ಮತ್ತು 6 ರಲ್ಲಿನ ಕಾಮಗಾರಿಗಳ ಅಂದಾಜು ಮೊತ್ತ ರೂ.50.00 ಲಕ್ಷಗಳ ಒಳಗೆ ಇರುತ್ತದೆ. ಅದರಂತೆ ರೂ.50.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ

S Shekhar -7

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯ ಆಯುಕ್ತರವರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜನೆ ಇರುವುದರಿಂದ, ಮಾನ್ಯ ಆಯುಕ್ತರವರು ಮೇಲ್ಕಂಡ ಎಲ್ಲಾ 6 ಕಾಮಗಾರಿಗಳನ್ನು ಅನುಮೋದನೆ ನೀಡಿರುವುದರಿಂದ ಕ್ರಮ ಸಂಖ್ಯೆ. 3, 5 ಮತ್ತು 6 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ ಎಂದು ಪರಿಗಣಿಸಲಾಗಿದೆ ಹಾಗೂ ಸದರಿ ಕಾಮಗಾರಿಯ ವಿವರಗಳು ಕೆಳಕಂಡಂತಿರುತ್ತದೆ.

| Sl. No. | Name of the work | Estimated Amount Rs. in Lakhs |
|---|---|---|
| 3 | Construction of Compound wall (Balance portion) to sanitary landfill site at Sy. No.48, Seegehalli village. | 34.00 |
| 5 | Providing and plantation of plant for green belt to sanitary landfill site at Sy. No.48, Seegehalli village. | 4.04 |
| 6 | Providing for a awareness campaign to public regarding sanitary landfill site at Sy. No.48, Seegehalli village. | 10.00 |

ಉಳಿದಂತೆ ಕ್ರಮ ಸಂಖ್ಯೆ.(1) ರ ಕಾಮಗಾರಿಯ ಅಂದಾಜು ಮೊತ್ತವು ರೂ.407.50 ಲಕ್ಷಗಳಾಗಿದ್ದು, ಅದರಂತೆ 200.00 ಲಕ್ಷಗಳ ಮೇಲ್ಪಟ್ಟು ರೂ.500.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಪಾಲಿಕೆಯ ಕೌನ್ಸಿಲ್ ಸಭೆಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರತ್ಯೇಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

| Sl. No. | Name of the work | Estimated Amount Rs. in Lakhs |
|---|---|---|
| 1 | Improvements and Asphalting to Kannahalli main road from Magadi main road to Seegehalli landfill site. | 407.50 |

ಮುಂದುವರೆದಂತೆ ಕ್ರಮ ಸಂಖ್ಯೆ.2 ಮತ್ತು 4 ರಲ್ಲಿನ ಕಾಮಗಾರಿಯ ಅಂದಾಜು ಮೊತ್ತ ರೂ.50.00 ಲಕ್ಷಗಳ ಮೇಲ್ಪಟ್ಟು ರೂ.200.00 ಲಕ್ಷಗಳ ಒಳಗೆ ಇರುತ್ತದೆ. ಅದರಂತೆ 50.00 ಲಕ್ಷಗಳ ಮೇಲ್ಪಟ್ಟು ರೂ.200.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರತ್ಯೇಕ ಕಡತವನ್ನು ಸಿದ್ಧಪಡಿಸಲಾಗಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl. No. | Name of the work | Estimated Amount Rs. in Lakhs |
|---|---|---|
| 2 | Improvements and Asphalting to Kannahalli main road from Seegehalli landfill site to Kannahalli landfill site. | 193.30 |
| 4 | Providing & Construction of Internal roads, office building, security room, toilet and weight bridge to sanitary landfill site at Sy. No.48, Seegehalli village. | 80.80 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಎರಡು (2) ಕಾಮಗಾರಿಗಳಿಗೆ ಕೆಳಗಿನವುಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ:24-05-2013ರ ಟಿಪ್ಪಣಿ.

1. ಪ್ರಸ್ತಾಪಿತ ಎರಡು (2) ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.274.10 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಗಳ ಅಂದಾಜು ಮೊತ್ತ ರೂ.274.10 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ0935 Approach roads ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

<u>ನಿರ್ಣಯ:-</u> ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು, ಸದರಿ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿರುವುದಾಗಿ ಅಧಿಕಾರಿಗಳು ತಿಳಿಸಿದ ಮೇರೆಗೆ, 15 ದಿನಗಳ ಒಳಗೆ ಮುಂದುವರೆದ ಟಿಪ್ಪಣಿಯೊಂದಿಗೆ ಟೆಂಡರ್ ಅನುಮೋದನೆ ಕಡತವನ್ನು ಸಮಿತಿಗೆ ಮಂಡಿಸಲು ಅಧಿಕಾರಿಗಳಿಗೆ ಸೂಚಿಸಿ, ವಿಷಯವನ್ನು ಮುಂದೂಡಲಾಯಿತು.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/04/13-14**

ಆಯುಕ್ತರು ರವರ ದಿನಾಂಕ 28-5-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಗೌರವಾನ್ವಿತ ಉಚ್ಚನ್ಯಾಯಾಲಯದ ದಾವೆ ಸಂಖ್ಯೆ: 24739-49/2012 ಮತ್ತು 30450/2012, ದಿನಾಂಕ: 22-11-2012 ರಂದು ನೀಡಿರುವ ಆದೇಶದಂತೆ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ (ಕೆ.ಸಿ.ಡಿ.ಸಿ.) ಸಂಸ್ಥೆಯು ಪ್ರತಿದಿನ ಸುಮಾರು 75-100 ಟನ್ ಬೇರ್ಪಡಿಸಿದ ಹಸಿ ತ್ಯಾಜ್ಯವನ್ನು ಸ್ವೀಕರಿಸಬೇಕೆಂದು ಹಾಗೂ ಇನ್ನಿತರೆ ನಿಬಂಧನೆಗಳನ್ನು ಪಾಲನೆ ಮಾಡಬೇಕೆಂದು ಸೂಚಿಸಲಾಗಿದೆ.

ಕೆ.ಸಿ.ಡಿ.ಸಿ. ಸಂಸ್ಥೆಯು ಬೆಂಗಳೂರು-ಹೊಸೂರು ರಸ್ತೆಯ ಕೂಡ್ಲು ಸಮೀಪವಿದ್ದು, ಈ ಘಟಕದ ವಿಸ್ತೀರ್ಣವು 15-ಎಕರೆ, 10-ಗುಂಟೆ ಹಾಗೂ ಪ್ರತ್ಯೇಕವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಗದ ವಿಸ್ತೀರ್ಣವು 14-ಎಕರೆ ಇರುತ್ತದೆ. ಈ ಘಟಕದಲ್ಲಿ 2007-08 ನೇ ಸಾಲಿನವರೆಗೆ ಬಿ.ಬಿ.ಎಂ.ಪಿ. ಯ ಘನತ್ಯಾಜ್ಯ ನಿರ್ವಹಣೆ ಮತ್ತು ಸಂಸ್ಕರಣೆಯಾಗುತ್ತಿದ್ದು, ನಂತರ ಕಾರ್ಯಾಚರಣೆ ನಿಂತು ಹೋಗಿರುತ್ತದೆ. ಈ ಘಟಕದಲ್ಲಿ ಘನತ್ಯಾಜ್ಯದಿಂದ ರಾಸಾಯನಿಕ ಗೊಬ್ಬರ ತಯಾರಿಸಲು ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಸುಮಾರು 05-ಎಕರೆ ಕಾಂಕ್ರೀಟು ಯಾರ್ಡ್ ಮತ್ತು 200 ಸಂಖ್ಯೆ (5' ಅಡಿX 50' ಅಡಿ) ವರ್ಮ್ ಕಾಂಪೋಸ್ಟ್ ಪಿಟ್‌ಗಳಿರುತ್ತವೆ.

ಗೌರವಾನ್ವಿತ ಉಚ್ಚನ್ಯಾಯಾಲಯದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೆ.ಸಿ.ಡಿ.ಸಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರತಿದಿನ 75 ರಿಂದ 100 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸ್ವೀಕರಿಸಲು ಕೋರಲಾಗಿದ್ದು, ಕೆ.ಸಿ.ಡಿ.ಸಿ. ಸಂಸ್ಥೆಯವರು ಈ ಘಟಕದ ಸುತ್ತಲೂ ಈಗಾಗಲೇ ಸಾರ್ವಜನಿಕ ವಸತಿಗಳು ನಿರ್ಮಾಣವಾಗಿದ್ದು, ಸಾರ್ವಜನಿಕರಿಂದ ಘನತ್ಯಾಜ್ಯ ಸ್ವೀಕರಿಸಲು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆಂದು ತಿಳಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೆ.ಸಿ.ಡಿ.ಸಿ. ಘಟಕಕ್ಕೆ ಈ ಕೆಳಗಿನ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ಕೆ.ಸಿ.ಡಿ.ಸಿ. ಸಂಸ್ಥೆಯು ಸರ್ಕಾರಕ್ಕೆ ದಿನಾಂಕ: 20-11-2012 ರಂದು ಪತ್ರವನ್ನು ಬರೆದಿರುತ್ತಾರೆ.

1. Shifting of old un-segregated garbage to nearby processing area to create space for accepting fresh segregated garbage requires appx. Amount of Rs.25.00 Lakhs.
2. Erection of MS sheet barricade up to 25ft height towards East and North side, where high rise buildings are located requires appx. Amount of Rs.2.00 Crores.
3. Planting of wind break trees with drip irrigation system all around the boundary including BBMP site of 30 Acres requires appx. Amount of Rs.20.00 Lakhs.
4. Creating a new approach road from HSR layout side to bring fresh segregated garbage.
5. Providing a covered high roof shelter on the concrete yard for about 2 acres area in order to control odour and generation of leachate for scientific processing of segregated MSW for production of vermin compost requires appx. Amount of Rs.2.00 Crores.

Total cost of the above works is Rs.4.45 Crores.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ-ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸರ್ಕಾರವು ತಮ್ಮ ಪತ್ರದ ಸಂಖ್ಯೆ: ನಅಇ/707/ಎಂಎನ್‌ವೈ 2012, ದಿನಾಂಕ: 30-11-2012 ರಲ್ಲಿ ಕೆ.ಸಿ.ಡಿ.ಸಿ. ಸಂಸ್ಥೆಯವರಿಗೆ ಮೂಲಭೂತ ಸೌಕರ್ಯಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಒದಗಿಸಲು ಆದೇಶಿಸಲಾಗಿದೆ.

**ಕೆ.ಸಿ.ಡಿ.ಸಿ. ಘಟಕದಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳ ವಿವರಗಳು**

Phase-1

| SL. NO. | NAME OF WORK | TOTAL AMOUNT IN RS. |
|---|---|---|
| 1 | ESTIMATE FOR SHIFTING UN-SEGREGATED WASTES AND STORING NEW SOLID WASTES IN KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192. NEAR HOSUR ROAD. | 25,00,000.00 |
| 2 | ESTIMATE FOR CONSTRUCTION OF MS SHEET BARRICADING IN NORTH AND EASTERN PORTIONS TO BLOCK THE VIEW HIGH RISE BUILDING AT KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192, NEAR HOSUR ROAD. PART-A. | 1,00,00,000.00 |
| 3 | ESTIMATE FOR CONSTRUCTION OF MS SHEET BARRICADING IN NORTH AND EASTERN PORTIONS TO BLOCK THE VIEW HIGH RISE BUILDING AT KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192, NEAR HOSUR ROAD. PART-B. | 1,00,00,000.00 |
| 4 | ESTIMATE FOR PLANTING TREES AROUND THE COMPOUND WALL TO PROTECT FROM BLOWING WIND AT KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192, NEAR HOSUR ROAD. | 20,00,000.00 |
| 5 | ESTIMATE FOR CONSTRUCTION OF APPROACH ROAD TO BRING NEW GARBAGE FROM HSR LAYOUT AND CONSTRUCTION OF ROOF TRUSS TO ARREST THE NUISANCE, SMELL AND VIEW RISING FROM WASTE SEGREGATION SCIENTIFICALLY AT KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192, NEAR HOSUR ROAD, PART-A. | 1,00,00,000.00 |
| 6 | ESTIMATE FOR CONSTRUCTION OF APPROACH ROAD TO BRING NEW GARBAGE FROM HSR LAYOUT AND CONSTRUCTION OF ROOF TRUSS TO ARREST THE NUISANCE, SMELL AND VIEW RISING FROM WASTE SEGREGATION SCIENTIFICALLY AT KARNATAKA COMPOST DEVELOPMENT CORPORATION, KUDLU VILLAGE, SINGASANDRA WARD NO.192, NEAR HOSUR ROAD, PART-B. | 1,00,00,000.00 |
| | **TOTAL AMOUNT** | **4,45,00,000.00** |

ಸದರಿ ಪ್ರಸ್ತಾವನೆಯನ್ನು ಪಾಲಿಕೆಯ ಸಾರ್ವಜನಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿದ್ದು, ದಿನಾಂಕ: 17-12-2012 ರಂದು ನಡೆದ ಸಭೆಯ ನಡಾವಳಿಗಳಲ್ಲಿ ಸಮಿತಿಯು ಈ ಪ್ರಸ್ತಾವನೆಯನ್ನು ಅನುಮೋದಿಸಿರುತ್ತದೆ. ಹಾಗೂ ಈ ಪ್ರಸ್ತಾವನೆಯನ್ನು ದಿನಾಂಕ: 28-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾಗಿದ್ದು (ವಿಷಯದ ಸಂಖ್ಯೆ: 01(305)/2012-13) ಸಭೆಯು ಈ ಪ್ರಸ್ತಾವನೆಯನ್ನು ಅನುಮೋದಿಸಿರುತ್ತದೆ.

ಗೌರವಾನ್ವಿತ ಉಚ್ಚನ್ಯಾಯಾಲಯದ ಆದೇಶದಂತೆ, ಈ ಮೇಲಿನ ಕಾಮಗಾರಿಗಳನ್ನು ಅತೀ ಜರೂರಾಗಿ ನಿಗಧಿತ ಕಾಲಮಿತಿಯೊಳಗೆ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗಳನ್ನು K.R.I.D.L. ಸಂಸ್ಥೆಯ ವತಿಯಿಂದ ಈಗಾಗಲೇ ಕೈಗೆತ್ತಿಕೊಳ್ಳಲು ಯೋಜಿಸಲಾಗಿದ್ದು, ರಸ್ತೆ ನಿರ್ಮಾಣದ ಕಾಮಗಾರಿ ಮತ್ತು ಹಳೆಯ ಘನತ್ಯಾಜ್ಯವನ್ನು ಸಾಗಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ರೀತಿ ಸದರಿ ಕಾಮಗಾರಿಗಳನ್ನು K.R.I.D.L. ಸಂಸ್ಥೆಯವರಿಗೆ ಕಾರ್ಯಗತ ಮಾಡಲು ನೀಡಿರುವ ಕ್ರಮಕ್ಕೆ ಸ್ಥಿರೀಕರಿಸಲು ಕೋರುತ್ತಾ, ಸದರಿ ಪ್ರಸ್ತಾವನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಹಾಗೂ ಆರೋಗ್ಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:-** ಮಾನ್ಯ ಆಯುಕ್ತರ ದಿ. 28-513ರ ಟಿಪ್ಪಣಿಯನ್ನು ಒಪ್ಪುತ್ತಾ ಸದರಿ ಪ್ರಸ್ತಾವನೆಗಳು ಸ್ಥಾಯಿ ಸಮಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಮಾನ್ಯ ಆಯುಕ್ತರಿಗೆ ಸೂಕ್ತ ಕ್ರಮಕ್ಕಾಗಿ ಕಡತಗಳನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

S Shobha [signature] -10

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/05/13-14**

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ 5–8–2013ರಂತೆ ದಿನಾಂಕ 31–10–2012ರಂದು ಪಾಲಿಕೆಯ ಕೇಂದ್ರ ಕಛೇರಿಯ ಸಭಾಂಗಣ–1ರಲ್ಲಿ ಮೆ॥ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳ ಗ್ರಾಮಸ್ಥರ ಸಮಸ್ಯೆಗಳ ಬಗ್ಗೆ ರೈತ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಮೆ॥ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ತೊಂದರೆಗೊಳಗಾದ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

13ನೇ ಹಣಕಾಸು ಆಯೋಗದ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಮೂಲಭೂತ ಸೌಲಭ್ಯ ಯೋಜನೆಗಳಿಗಾಗಿ ಒಟ್ಟು ರೂ. 200–00ಲಕ್ಷಗಳ ಅನುದಾನ ದೊರಕಿರುತ್ತದೆ. ಸದರಿ ಅನುದಾನದಲ್ಲಿ ರೂ. 19.00 ಕೋಟಿಗಳ ಅನುದಾನವನ್ನು ಪಾಲಿಕೆಯ ತ್ಯಾಜ್ಯ ವಿಲೇವಾರಿ ಘಟಕಗಳಾದ ಮಂಡೂರು, ಮಾವಳ್ಳಿಪುರ, ಸುಬ್ಬರಾಯನಪಾಳ್ಯ, ಗುಂಡ್ಲಹಳ್ಳಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಮೀಡಲಿಡಲಾಗಿರುತ್ತದೆ.

ಮಂಜೂರಾದ ಅನುದಾನದ ಪೈಕಿ ಮೆ॥ಟೆರ್ರಫರ್ಮ ಸಂಸ್ಥೆಯ ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ : ಸಾ.ಆ.ಸ್ಥಾ.ಸ/75/2012–13 ದಿನಾಂಕ 11–01–2013ಅನುಮೋದನೆ ಮೇರೆಗೆ ಸದರಿ ಮೆ॥ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸಂಪರ್ಕ ರಸ್ತೆಯಾದ ಕೆ.ಎಸ್.ರಸ್ತೆಯಿಂದ ಹಾಲಪ್ಪನಹಳ್ಳಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಪಡಿಸಲು ಅನುಮೋದಿತ ಅಂದಾಜು ಮೊತ್ತ ರೂ. 287.00ಲಕ್ಷಗಳ ಕಾಮಗಾರಿಯ ಟೆಂಡರ್‌ನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಅಲ್ಪಾವಧಿಟೆಂಡರ್ ಆಹ್ವಾನಿಸಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು.

ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಗಿನಂತಿರುತ್ತವೆ.

- ಟೆಂಡರ್ ಅಧಿಸೂಚನೆ ಸಂಖ್ಯೆ: EE-3/SWM/Tend/02/2012-13 dated: 15.02.2013
- ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 23-02-2013
- ತಾಂತ್ರಿಕ ಬಿಡ್‌ಅನ್ನು ತೆರೆಯಲು ನಿಗಧಿಪಡಿಸಿದ ದಿನಾಂಕ: 27-02-2013

ಟೆಂಡರ್ ಪ್ರಕಟಣೆಯನ್ನು ಕನ್ನಡ ಪ್ರಭ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಗಳಲ್ಲಿ ದಿನಾಂಕ 15-02-2013ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರಿನಲ್ಲಿ ಬಿಡ್ಡುದಾರರಾದ 1) ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು 2) ಶ್ರೀ. ಎಂ.ವೆಂಕಟಾಚಲಪತಿ 1ನೇ ದರ್ಜೆ ಗುತ್ತಿಗದಾರರು ಮತ್ತು 3) ಶ್ರೀ. ರಾಮಯ್ಯ ಲೋಕೇಶ್ 1ನೇ ದರ್ಜೆ ಗುತ್ತಿಗದಾರರು ಭಾಗವಹಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 01-03-2013ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ವೆಬ್ ಸೈಟ್‌ನಲ್ಲಿ ತೆರೆದು ಪರಿಶೀಲಿಸಲಾಗಿ ಶ್ರೀ. ಕೆ. ಸೋಮಪ್ಪ, ಶ್ರೀ. ಎಂ. ವೆಂಕಟಾಚಲಪತಿ ಮತ್ತು ಶ್ರೀ. ರಾಮಯ್ಯ ಲೋಕೇಶ್ ವರರ ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು ಅರ್ಹರಾದ ಹಿನ್ನೆಲೆಯಲ್ಲಿ ಸದರಿಯವರ ಆರ್ಥಿಕ ಬಿಡ್‌ಗಳನ್ನು ದಿನಾಂಕ 13-03-2013ರಂದು ತೆರೆಯಲಾಗಿರುತ್ತದೆ.

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಗಿನಂತಿರುತ್ತವೆ.

- ಅಂದಾಜು ಮೊತ್ತ - ರೂ.287.00 ಲಕ್ಷಗಳು
- ಆಡಳಿತಾತ್ಮಕ ಮಂಜೂರಾತಿ ಸಂ - ಮು.ಅ./ಘ.ತ್ಯಾ.ನಿ-1/ಆ.ಮಂ./76/12-13 ದಿನಾಂಕ: 14-02-2013
- ತಾಂತ್ರಿಕ ಮಂಜೂರಾತಿ ಸಂ. - ಮು.ಅ./ಘ.ತ್ಯಾ.ನಿ-1/ತಾಂ.ಮಂ/74/2012-13

S Shell
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 14-02-2013

- ಭದ್ರತಾ ಠೇವಣಿ ಮೊತ್ತ - ರೂ. 4,30,500/-
- ಟೆಂಡರ್‌ಗಿಟ್ಟ ಮೊತ್ತ - ರೂ. 2,82,43,264/-

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಅರ್ಹ ಬಿಡ್ಡುದಾರರು ನಮೂದಿಸಿರುವ ದರಗಳು ಹಾಗೂ ಆರ್ಥಿಕ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ಬಿಡ್ಡುದಾರರ ಹೆಸರು | ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಅನುಮೋದಿತ ಟೆಂಡರ್‌ಗಿಟ್ಟ ಮೊತ್ತಕ್ಕೆ (2,82,43,264) ಹೋಲಿಸಿದಲ್ಲಿ ಶೇಕಡವಾರು | ಚಾಲ್ತಿಯಲ್ಲಿರುವ Schedule rates ಮೊತ್ತ ರೂ. 2,90,57,896/-ಕ್ಕೆ As on date of tender submission) ಹೋಲಿಸಿದಲ್ಲಿ ಶೇಕಡವಾರು ಹೆಚ್ಚು/ಕಡಿಮೆ |
|---|---|---|---|---|
| 1 | ಶ್ರೀ. ಕೆ.ಸೋಮಪ್ಪ 1ನೇ ದರ್ಜೆ ಗುತ್ತಿಗೆದಾರರು | 2,65,50,940/- | -5.99% (ಕಡಿಮೆ) | -8.63% (ಕಡಿಮೆ) |
| 2 | ಶ್ರೀ. ಎಂ.ವೆಂಕಟಾಚಲಪತಿ 1ನೇ ದರ್ಜೆ ಗುತ್ತಿಗೆದಾರರು | 2,73,96,295/- | -3.00% ಕಡಿಮೆ | -5.72% (ಕಡಿಮೆ) |
| 3 | ಶ್ರೀ. ರಾಮಯ್ಯ 1ನೇ ದರ್ಜೆ ಗುತ್ತಿಗೆದಾರರು | 2,97,00,500/- | 5.16(ಹೆಚ್ಚು) | 2.21(ಹೆಚ್ಚು) |

ಸದರಿ ಟೆಂಡರ್‌ನ್ಲಲಿ ಭಾಗವಹಿಸಿರುವ ಮೂವರು ಅರ್ಹ ಬಿಡ್ಡುದಾರರ ಪೈಕಿ ಶ್ರೀ. ಕೆ.ಸೋಮಪ್ಪ, 1ನೇ ದಜೆ ಗುತ್ತಿಗೆದಾರರು ರವರು ನಮೂದಿಸಿರುವ ದರಗಳು ಕಡಿಮೆ ಇದ್ದು ಎಲ್-1 ಗುತ್ತಿಗೆದಾರರಾಗಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯ ದ್ವಿಲಕೋಟೆ ಪದ್ಧತಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹ ಗುತ್ತಿಗೆದಾರರಾದ ಶ್ರೀ. ಕೆ. ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. 2,65,50,940/-ಗಳನ್ನು 2012-13ನೇ ಸಾಲಿನ ಚಾಲ್ತಿಯಲ್ಲಿರುವ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ. 8.63ರಷ್ಟು ಕಡಿಮೆ ದರಗಳ ಟೆಂಡರ್‌ನ್ನು ಅನುಮೋದಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಮುಂದೆ ಮಂಡಿಸಿರುವ ಬಗ್ಗೆ.

**ನಿರ್ಣಯ:-** ವಿಶೇಷ ಆಯುಕ್ತರು (ಯೋಜನೆ)ರವರ ದಿ 5-8-13ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/06/13-14**

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ 5-8-2013ರಂತೆ ದಿನಾಂಕ 31-10-2012ರಂದು ಪಾಲಿಕೆಯ ಕೇಂದ್ರ ಕಛೇರಿಯ ಸಭಾಂಗಣ-1ರಲ್ಲಿ ಮೆ॥ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳ ಗ್ರಾಮಸ್ಥರ ಸಮಸ್ಯೆಗಳ ಬಗ್ಗೆ ರೈತ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಮೆ॥ಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ತೊಂದರೆಗೊಳಗಾದ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

13ನೇ ಹಣಕಾಸು ಆಯೋಗದ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಮೂಲಭೂತ ಸೌಲಭ್ಯ ಯೋಜನೆಗಳಿಗಾಗಿ ಒಟ್ಟು ರೂ. 200-00ಲಕ್ಷಗಳ ಅನುದಾನ ದೊರಕಿರುತ್ತದೆ. ಸದರಿ ಅನುದಾನದಲ್ಲಿ ರೂ. 19.00 ಕೋಟಿಗಳ ಅನುದಾನವನ್ನು ಪಾಲಿಕೆಯ ತ್ಯಾಜ್ಯ ವಿಲೇವಾರಿ ಘಟಕಗಳಾದ ಮಂಡೂರು, ಮಾವಳ್ಳಿಪುರ, ಸುಬ್ಬರಾಯನಪಾಳ್ಯ, ಗುಂಡ್ಲಹಳ್ಳಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಮೀಡಲಿಡಲಾಗಿರುತ್ತದೆ.

-12

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಂಜೂರಾದ ಅನುದಾನದ ಪೈಕಿ ಮೊಟೆರ್ರಫರ್ಮ ಸಂಸ್ಥೆಯ ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ : ಸಾ.ಆ.ಸ್ಥಾ.ಸ/75/2012–13 ದಿನಾಂಕ 11–01–2013ಅನುಮೋದನೆ ಮೇರೆಗೆ ಸದರಿ ಮೊಟೆರ್ರಫರ್ಮ ತ್ಯಾಜ್ಯ ಸಂಸ್ಕರಣಾ ಘಟಕದ ಸಂಪರ್ಕ ರಸ್ತೆಯಾದ ಕೆ.ಎಸ್.ರಸ್ತೆಯಿಂದ ಹಾಲಪ್ಪನಹಳ್ಳಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಪಡಿಸಲು ಅನುಮೋದಿತ ಅಂದಾಜು ಮೊತ್ತ ರೂ. 125–00ಲಕ್ಷಗಳ ಕಾಮಗಾರಿಯ ಟೆಂಡರ್‌ನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ಅಡಿಯಲ್ಲಿ ದ್ವಿಲಕೋಟಿ ಪದ್ಧತಿಯಡಿಯಲ್ಲಿ ಅಲ್ಪಾವಧಿಟೆಂಡರ್ ಆಹ್ವಾನಿಸಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು.

ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಗಿನಂತಿರುತ್ತವೆ.

- ಟೆಂಡರ್ ಅಧಿಸೂಚನೆ ಸಂಖ್ಯೆ: EE-3/SWM/Tend/02/2012-13 dated: 15.02.2013
- ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 23-02-2013
- ತಾಂತ್ರಿಕ ಬಿಡ್‌ಅನ್ನು ತೆರೆಯಲು ನಿಗಧಿಪಡಿಸಿದ ದಿನಾಂಕ: 27-02-2013

ಟೆಂಡರ್ ಪ್ರಕಟಣೆಯನ್ನು ಕನ್ನಡ ಪ್ರಭ ಹಾಗೂ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಗಳಲ್ಲಿ ದಿನಾಂಕ 15-02-2013ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರಿನಲ್ಲಿ ಬಿಡ್ಡುದಾರರಾದ 1) ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು 2) ಶ್ರೀ. ಎಂ.ವೆಂಕಟಾಚಲಪತಿ 1ನೇ ದರ್ಜೆ ಗುತ್ತಿಗದಾರರು ಮತ್ತು 3) ಶ್ರೀ. ರಾಮಯ್ಯ ಲೋಕೇಶ್ 1ನೇ ದರ್ಜೆ ಗುತ್ತಿಗದಾರರು ಭಾಗವಹಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 01-03-2013ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ವೆಬ್ ಸೈಟ್‌ನಲ್ಲಿ ತೆರೆದು ಪರಿಶೀಲಿಸಲಾಗಿ ಶ್ರೀ. ಕೆ. ಸೋಮಪ್ಪ, ಶ್ರೀ. ಎಂ. ವೆಂಕಟಾಚಲಪತಿ ಮತ್ತು ಶ್ರೀ. ರಾಮಯ್ಯ ಲೋಕೇಶ್ ವರರ ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು ಅರ್ಹರಾದ ಹಿನ್ನೆಲೆಯಲ್ಲಿ ಸದರಿಯವರ ಆರ್ಥಿಕ ಬಿಡ್‌ಗಳನ್ನು ದಿನಾಂಕ 13-03-2013ರಂದು ತೆರೆಯಲಾಗಿರುತ್ತದೆ.

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಗಿನಂತಿರುತ್ತವೆ.

- ಅಂದಾಜು ಮೊತ್ತ - ರೂ.125.00 ಲಕ್ಷಗಳು
- ಆಡಳಿತಾತ್ಮಕ ಮಂಜೂರಾತಿ ಸಂ - ಮು.ಅ./ಘ.ತ್ಯಾ.ನಿ-1/ಆ.ಮಂ./82/12-13 ದಿನಾಂಕ: 14-02-2013
- ತಾಂತ್ರಿಕ ಮಂಜೂರಾತಿ ಸಂ. - ಮು.ಅ./ಘ.ತ್ಯಾ.ನಿ-1/ತಾಂ.ಮಂ/80/2012-13 ದಿನಾಂಕ: 14-02-2013
- ಭದ್ರತಾ ಠೇವಣಿ ಮೊತ್ತ - ರೂ. 1,87,500/-
- ಟೆಂಡರ್‌ಗಿಟ್ಟ ಮೊತ್ತ - ರೂ. 1,23,48,486/-

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಅರ್ಹ ಬಿಡ್ಡುದಾರರು ನಮೂದಿಸಿರುವ ದರಗಳು ಹಾಗೂ ಆರ್ಥಿಕ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ಬಿಡ್ಡುದಾರರ ಹೆಸರು | ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಅನುಮೋದಿತ ಟೆಂಡರ್‌ಗಿಟ್ಟ ಮೊತ್ತಕ್ಕೆ (2,82,43,264) ಹೋಲಿಸಿದಲ್ಲಿ ಶೇಕಡವಾರು | ಚಾಲ್ತಿಯಲ್ಲಿರುವ Schedule rates ಮೊತ್ತ ರೂ. 2,90,57,896/–ಕ್ಕೆ As on date of tender |
|---|---|---|---|---|

S Shell... (signature) –13

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | | | submission)<br>ಹೋಲಿಸಿದಲ್ಲಿ<br>ಶೇಕಡವಾರು<br>ಹೆಚ್ಚು/ಕಡಿಮೆ |
|---|---|---|---|---|
| 1 | ಶ್ರೀ. ಕೆ.ಸೋಮಪ್ಪ 1ನೇ ದರ್ಜೆ ಗುತ್ತಿಗೆದಾರರು | 1,16,41,259-00 | -5.73% (ಕಡಿಮೆ) | -8.26% (ಕಡಿಮೆ) |
| 2 | ಶ್ರೀ. ಎಂ.ವೆಂಕಟಾಚಲಪತಿ 1ನೇ ದರ್ಜೆ ಗುತ್ತಿಗೆದಾರರು | 1,19,77,878-00 | -3.00% ಕಡಿಮೆ | -5.61% (ಕಡಿಮೆ) |
| 3 | ಶ್ರೀ. ರಾಮಯ್ಯ 1 ನೇ ದರ್ಜೆ ಗುತ್ತಿಗೆದಾರರು | 1,30,20,344/- | 5.44(ಹೆಚ್ಚು) | 2.61(ಹೆಚ್ಚು) |

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಮೂವರು ಅರ್ಹ ಬಿಡ್ಡುದಾರರ ಪೈಕಿ ಶ್ರೀ. ಕೆ.ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು ರವರು ನಮೂದಿಸಿರುವ ದರಗಳು ಕಡಿಮೆ ಇದ್ದು ಎಲ್-1 ಗುತ್ತಿಗೆದಾರರಾಗಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯ ದ್ವಿಲಕೋಟೆ ಪದ್ಧತಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹ ಗುತ್ತಿಗೆದಾರರಾದ ಶ್ರೀ. ಕೆ. ಸೋಮಪ್ಪ, 1ನೇ ದರ್ಜೆ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. 1,16,41,259/-ಗಳನ್ನು 2012-13ನೇ ಸಾಲಿನ ಚಾಲ್ತಿಯಲ್ಲಿರುವ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ. 8.26ರಷ್ಟು ಕಡಿಮೆ ದರಗಳ ಟೆಂಡರ್‌ನ್ನು ಅನುಮೋದಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಬಗ್ಗೆ.

**<u>ನಿರ್ಣಯ:-</u>** ವಿಶೇಷ ಆಯುಕ್ತರು (ಯೋಜನೆ)ರವರ ದಿ 5-8-13ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.

**<u>ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/07/13-14</u>**

ಮಾನ್ಯ ಆಯುಕ್ತರವರ ದಿನಾಂಕ 26-9-2013ರ ಟಿಪ್ಪಣಿಯಲ್ಲಿ ತಿಳಿಸಿರುವಟಿತೆ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 4000 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ವಿಲೇವಾರಿ ಮಾಡುವುದು ಪಾಲಿಕೆಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಸ್ಥಳಗಳಲ್ಲಿ ಈಗಾಗಲೇ ಘಟಕಗಳನ್ನು ಸ್ಥಾಪಿಸಲಾಗಿದೆ.

1. ಮಾವಳ್ಳಿಪುರ – 600 ಮೆ.ಟನ್
2. ಮಂಡೂರ (ಉತ್ತರ) – 300 ಮೆ.ಟನ್
3. ಮಂಡೂರ (ದಕ್ಷಿಣ) – 1000 ಮೆ.ಟನ್
4. ಗುಂಡ್ಲಹಳ್ಳಿ – 1000 ಮೆ.ಟನ್
5. ಚೀಮಸಂದ್ರ – 300 ಮೆ.ಟನ್
6. ಎಸ್.ಬಿಂಗಿಪುರ – 500 ಮೆ.ಟನ್

ಮೇಲ್ಕಂಡ ಸ್ಥಳಗಳ ಪೈಕಿ ಚೀಮಸಂದ್ರ ಘಟಕವನ್ನು ಮುಚ್ಚಲಾಗಿದ್ದು, ಮಾವಳ್ಳಿಪುರ ಘಟಕವನ್ನು ಸಾರ್ವಜನಿಕರ ಪ್ರತಿಭಟನೆ ಎದುರಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದಂತೆ ಸ್ಥಗಿತಗೊಳಿಸಲಾಗಿದೆ. ಉಳಿದಂತಹ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ನಗರದಲ್ಲಿ ಗಣನೀಯ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ನಿರ್ವಹಿಸಬೇಕಾಗಿರುವುದರಿಂದ, ಮೇಲ್ಕಂಡ ಘಟಕಗಳಲ್ಲಿ ಒತ್ತಡ ಹೆಚ್ಚಾಗಿರುತ್ತದೆ.

S Shashi Rekha
-14

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ನಿಟ್ಟಿನಲ್ಲಿ ಕೆಳಕಂಡ ಸ್ಥಳಗಳಲ್ಲಿ ಹೊಸದಾಗಿ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

1. ಸುಬ್ಬರಾಯನಪಾಳ್ಯ – 750 ಮೆ.ಟನ್ (ಮೆ॥ ಹಂಜೀರ್ ಬಯೋಟೆಕ್ ಪ್ರೈ.ಲಿ)
2. ಮಂಡೂರು – 1000 ಮೆ.ಟನ್ (ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್)
3. ಗೊರೂರು ಗ್ರಾಮ, ಮಾಗಡಿ ತಾಲ್ಲೂಕು – 600 ಮೆ.ಟನ್ (ಮೆ॥ಸತಾರೆಂ ಎಂಟರ್ ಪ್ರೈಸೆಸ್)

ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ತಲೆದೋರಿರುವ ಸಮಸ್ಯೆಯನ್ನು ಮುಂದಿನ ದಿನಗಳಲ್ಲಿ ತಡೆಗಟ್ಟುವ ಉದ್ದೇಶದಿಂದ ಪರ್ಯಾಯ ಕ್ರಮವಾಗಿ ಹೆಚ್ಚು ಘಟಕಗಳನ್ನು ಸ್ಥಾಪಿಸಬೇಕಾದ ಅನಿವಾರ್ಯತೆಯಿದ್ದು Long Term ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಅವಶ್ಯಕತೆಯಿರುವುದರಿಂದ ಹೆಚ್ಚುವರಿ ಘಟಕಗಳನ್ನು ಸ್ಥಾಪಿಸಲು ಉದ್ಧೇಶಿಸಲಾಗಿದೆ.

ಈ ನಿಟ್ಟಿನಲ್ಲಿ "ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85ರ 20.00 (ಎಕರೆ-ಗುಂಟೆ) ಪಾಲಿಕೆ ಜಾಗದಲ್ಲಿ ಪ್ರತಿ ದಿನ 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕ" ಸ್ಥಾಪಿಸಲು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಕಟಣೆ ಸಂಖ್ಯೆ: EE-3/SWM-1/TEND/08/2012-13 ದಿನಾಂಕ: 11/03/2013 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ತಾಂತ್ರಿಕ ಬಿಡ್ಡನ್ನು ದಿನಾಂಕ: 30.04.2013 ರಂದು ತೆರೆದು ಪರಿಶೀಲಿಸಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಬಿಡ್ಡುದಾರರು ಭಾಗವಹಿಸಿದ್ದ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಅನ್ನು ರದ್ದುಪಡಿಸಿ, ದಿನಾಂಕ: 09/05/2013 ರಂದು ಮರು ಅಲ್ಪಾವಧಿ 2ನೇ ಕರೆಯ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ದಿನಾಂಕ: 25-05-2013 ರಂದು ಸದರಿ 2ನೇ ಕರೆಯ ತಾಂತ್ರಿಕ ಬಿಡ್ಡನ್ನು ನೆರದಿದ್ದ ಬಿಡ್‌ದಾರರ ಸಮ್ಮುಖದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆಯಲಾಗಿರುತ್ತದೆ. ಈ ಟೆಂಡರ್‌ನಲ್ಲಿ ಭಾಗವಹಿಸಿದ ಏಜೆನ್ಸಿ ರವರ ವಿವರಗಳು ಈ ಕೆಳಕಂಡಂತಿದೆ.

1. ಮೆ॥ ರಾಮ್ಕಿ ಎನ್‌ವಿರೊ ಇಂಜಿನಿಯರ್ಸ್ ಲಿಮಿಟೆಡ್.
2. ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್.
3. ಮೆ॥ ಪೇಸ್ ಪವರ್ ಸಿಸ್ಟಮ್ಸ್ (ಪ್ರೈ) ಲಿಮಿಟೆಡ್.

ಮೇಲ್ಕಂಡ 3 ಏಜೆನ್ಸಿ ರವರು ಟೆಂಡರ್ ನಿಬಂಧನೆಗಳನ್ನು ಯಶಸ್ವಿಯಾಗಿ ಪೂರೈಸಿರುವ ಹಿನ್ನೆಲೆಯಲ್ಲಿ ಹಾಗೂ ಸ್ಥಾಪಿಸಲು ಉದ್ದೇಶಿಸಿರುವ ಘಟಕದ ಯೋಜನಾ ವರದಿಯ (DPR) ತಾಂತ್ರಿಕ ಅಂಶಗಳನ್ನು ಪರಿಶೀಲಿಸಲು ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿತ್ತು.

| | |
|---|---|
| ವಿಶೇಷ ಆಯುಕ್ತರು (ಯೋಜನೆ) | ಅಧ್ಯಕ್ಷರು |

S Sheshadri -15
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | |
|---|---|
| ಅಪರ ಆಯುಕ್ತರು (ಘ.ತ್ಯಾ.ನಿ) | ಸದಸ್ಯರು |
| ಅಪರ ಆಯುಕ್ತರು (ಹಣಕಾಸು) | ಸದಸ್ಯರು |
| ಮುಖ್ಯ ಅಭಿಯಂತರರು, ಘ.ತ್ಯಾ.ನಿ-1 | ಸದಸ್ಯರು |
| ಮುಖ್ಯಸ್ಥರು, ಕಾನೂನು ಕೋಶ | ಸದಸ್ಯರು |
| ಕಾರ್ಯಪಾಲಕ ಅಭಿಯಂತರರು-3, ಘ.ತ್ಯಾ.ನಿ-1 | ಸಂಚಾಲಕರು |
| ಡಾ||ಹೆಚ್.ಎನ್.ಚಾಣಕ್ಯ, ವಿಜ್ಞಾನಿ (ಐ.ಐ.ಎಸ್.ಸಿ) | ಸದಸ್ಯರು |
| ಶ್ರೀ. ಸಂಪತ್ ಕುಮಾರ್, ಮೆ||ಟೈಡ್ ಟೆಕ್ನೋಕ್ರಾಫ್ಟ್ ಪ್ರೈ.ಲಿ. | ಸದಸ್ಯರು |

ದಿನಾಂಕ: 15.06.2013 ರಂದು ನಡೆದ ಮೊದಲನೇ "Technical bid evaluation committee" ಸಭೆಯಲ್ಲಿ ತೀರ್ಮಾನಿಸಿದಂತೆ, ಬಿಡ್ದುದಾರರು ತಮ್ಮ ತಮ್ಮ ಪ್ರಾತ್ಯಕ್ಷಿಕೆಯನ್ನು ಸಮಿತಿಯ ಮುಂದೆ ದಿನಾಂಕ: 21.06.2013 ರಂದು ನಡೆದ ಎರಡನೇ ಸಭೆಯಲ್ಲಿ ಮಂಡಿಸಿದರು ಹಾಗೂ ಸಮಿತಿಯು ಸದರಿ ಬಿಡ್ಡನಲ್ಲಿ ಸಲ್ಲಿಸಿರುವ, ಈಗಾಗಲೇ ನಿರ್ವಹಣೆ ಮಾಡುತ್ತಿರುವ ಯಾವುದಾದರು ಒಂದು ಸಂಸ್ಕರಣಾ ಘಟಕದ ಪರಿಸರ ಮಾಲಿನ್ಯದ ಅಂಕಿಅಂಶಗಳನ್ನು ನೇರವಾಗಿ (live data) ಸಮಿತಿಯ ಮುಂದೆ ಮಂಡಿಸಲು ಸೂಚಿಸಲಾಗಿತ್ತು. ಅದರಂತೆ ದಿನಾಂಕ: 18.07.2013 ರಂದು ನಡೆದ ಸಭೆಯಲ್ಲಿ ಅಂತರ್ಜಾಲದ ವೈಪಲ್ಯದ ಕಾರಣದಿಂದಾಗಿ live data ಅನ್ನು ಸಮಿತಿಯ ಮುಂದೆ ಮಂಡಿಸಲಾಗದ ಕಾರಣ ಬಿಡ್ದುದಾರರ ಕಛೇರಿಯಲ್ಲಿ ಹಾಗೂ ಅವರವರ ಅಂತರ್ಜಾಲದ ಮೂಲಕ live data ತೋರಿಸಲು ಸೂಚಿಸಲಾಗಿತ್ತು (ಸಭೆಯ ನಡಾವಳಿಗಳನ್ನು ಅವಗಾಹನೆಗಾಗಿ ಕಡತದಲ್ಲಿರಿಸಿದೆ).

ಮುಂದುವರೆದಂತೆ, ದಿನಾಂಕ: 20.07.2013, 29.07.2013 ಮತ್ತು 02.08.2013 ರಂದು ಕ್ರಮವಾಗಿ ಮೆ|| ರಾಮ್ಕಿ ಎನ್‌ವಿರೊ ಇಂಜಿನಿಯರ್ಸ್ ಲಿಮಿಟೆಡ್, ಮೆ|| ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಮತ್ತು ಮೆ|| ಪೇಸ್ ಪವರ್ ಸಿಸ್ಟಮ್ಸ್ (ಪ್ರೈ) ಲಿಮಿಟೆಡ್ ಸಂಸ್ಥೆಯವರು ಅವರವರ ಕಛೇರಿಯಲ್ಲಿ ಸಂಸ್ಕರಣಾ ಘಟಕದ ಪರಿಸರ ಮಾಲಿನ್ಯದ ಅಂಕಿ ಅಂಶಗಳನ್ನು (live data) ನೇರವಾಗಿ ಪ್ರದರ್ಶಿಸಿದರು.

ಈ ಎಲ್ಲಾ ಅಂಶಗಳನ್ನು ಆಧರಿಸಿ ಸಮಿತಿಯ ನುರಿತ ತಜ್ಞರಾದ ಡಾ|| ಹೆಚ್.ಎನ್. ಚಾಣಕ್ಯ, ಹಾಗೂ ಶ್ರೀ. ಸಂಪತ್‌ಕುಮಾರ್ ರವರುಗಳು ವರದಿಯನ್ನು ನೀಡಿರುತ್ತಾರೆ. ಈ ವರದಿಯನ್ನು ತಮ್ಮ ಅವಗಾಹನೆಗಾಗಿ ಕಡತದಲ್ಲಿರಿಸಿದೆ. ಈ ವರದಿನ್ವಯ ಈ ಕೆಳಗಿನ ನಿಬಂಧನೆಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಿರುವ ಎಲ್ಲಾ ಮೂರು ಬಿಡ್ದುದಾರರುಗಳಿಂದ ಒಪ್ಪಿಗೆ ಪತ್ರ ಪಡೆಯಲು ಶಿಫಾರಸ್ಸು ಮಾಡಿರುತ್ತಾರೆ.

- ಮಾನ್ಯ ಸರ್ವೋಚ್ಚನ್ಯಾಯಾಲಯದ ಸಮಿತಿಯಿಂದ ತ್ಯಾಜ್ಯದಿಂದ ವಿದ್ಯುತ್ ಉತ್ಪಾಧಿಸುವ ಘಟಕ ಸ್ಥಾಪನೆಗೆ (Involving combustion of the organic fraction) ಅನುಮತಿ ಪಡೆಯುವುದು ಯಶಸ್ವಿ ಬಿಡ್ದುದಾರರ ಹೊಣೆ.
- ಸದರಿ ಸಂಸ್ಥೆಗೆ ಸರಬರಾಜು ಮಾಡುವ ಘನತ್ಯಾಜ್ಯವನ್ನು ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಮಾವಳಿಗಳಂತೆ ನಿರ್ವಹಿಸುವ.
- ವಾಸನೆ, ಲೀಚೆಟ್ ಹಾಗೂ ಇದರಿಂದಾಗಿ ನೊಣ ಸೊಳ್ಳೆಗಳ ಹಾವಳಿ ನಿಯಂತ್ರಿಸಲು Closed shed ನಲ್ಲಿ ಸಂಸ್ಕರಣೆ ಮಾಡುವ.

S Shobhitha

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

-16

ಆದ್ದರಿಂದ ಮೇಲ್ಕಂಡ ನಿಬಂಧನೆಗಳಿಗೆ ಒಪ್ಪಿಗೆ ಪತ್ರ ನೀಡುವಂತೆ ಎಲ್ಲಾ ಬಿಡ್ಡುದಾರರುಗಳಿಗೆ ತಿಳಿಸಲಾಯಿತು. ಅದರಂತೆ ಎಲ್ಲಾ ಮೂರು ಬಿಡ್ಡುದಾರರು ಮೇಲ್ಕಂಡ ನಿಬಂಧನೆಗಳಿಗೆ ಒಳಪಟ್ಟು Consent ಪತ್ರಗಳನ್ನು ನೀಡಿರುತ್ತಾರೆ. ಪತ್ರಗಳನ್ನು ಅವಗಾಹನೆಗಾಗಿ ಕಡತದಲ್ಲಿ ಲಗತ್ತಿಸಿದೆ.

ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಎಲ್ಲಾ ಮೂರು ಬಿಡ್ಡುದಾರರುಗಳನ್ನು ತಾಂತ್ರಿಕವಾಗಿ ಅರ್ಹಗೊಳಿಸಿ, ಇವರ ಆರ್ಥಿಕ ಬಿಡ್ಡ್‌ಗಳನ್ನು ದಿನಾಂಕ: 22.08.2013 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದು ಪರಿಶೀಲಿಸಲಾಗಿ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಬಿಡ್ಡುದಾರರು | ನಮೂದಿಸಿದ ದರ (ಪ್ರತಿ ಮೆಟ್ರಿಕ್ ಟನ್‌ಗೆ) |
|---|---|---|
| 1. | ಮೆ॥ ರಾಮ್ಕಿ ಎನ್‌ವೈರೊ ಇಂಜಿನೀಯರ್ಸ್ ಲಿಮಿಟೆಡ್. | ರೂ. 891.00 |
| 2. | ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್. | ರೂ. 279.00 |
| 3. | ಮೆ॥ ಪೇಸ್ ಪವರ್ ಸಿಸ್ಟಮ್ಸ್ (ಪ್ರೈ) ಲಿಮಿಟೆಡ್. | ರೂ. 445.50 |

ಈ ಮೇಲ್ಕಂಡ ಮೂವರು ಬಿಡ್ಡುದಾರರ ಆರ್ಥಿಕ ಬಿಡ್ಡನ್ನು ತುಲನೆ ಮಾಡಲಾಗಿ, ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಯವರು ರೂ.279/- ಗಳನ್ನು ಪ್ರತಿ ಮೆಟ್ರಿಕ್ ಟನ್ ಘನತ್ಯಾಜ್ಯಕ್ಕೆ ಸಂಸ್ಕರಣಾ ಶುಲ್ಕ (Tipping fee) ವನ್ನಾಗಿ ನಮೂದಿಸಿ ಕಡಿಮೆ ಬಿಡ್ಡುದಾರರಾಗಿರುತ್ತಾರೆ.

ಅದರಂತೆ ಸದರಿ ಘನತ್ಯಾಜ್ಯ ಸಂಸ್ಕರಣೆಗೆ ತಗಲುವ ವೆಚ್ಚದ ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| 1 | ಸಂಸ್ಕರಣಾ ಶುಲ್ಕ (Tipping fee) | ರೂ. 279.00 ಪ್ರತಿ ಮೆಟ್ರಿಕ್ ಟನ್‌ಗೆ |
| 2 | ಪ್ರತಿದಿನ 600 ಮೆ.ಟನ್ ಘನತ್ಯಾಜ್ಯ ಸಂಸ್ಕರಣಕ್ಕೆ ತಗಲುವ ವೆಚ್ಚ | ರೂ. 1,67,400.00 |
| 3 | ಪ್ರತಿದಿನ 600 ಮೆ.ಟನ್ ಗಳಂತೆ 1ತಿಂಗಳಿಗೆ ತಗಲುವ ಘನತ್ಯಾಜ್ಯ ಸಂಸ್ಕರಣಾ ವೆಚ್ಚ | ರೂ. 50,22,000.00 |
| 4 | ಪ್ರತಿದಿನ 600 ಮೆ.ಟನ್ ಗಳಂತೆ 1 ವರ್ಷಕ್ಕೆ ತಗಲುವ ಘನತ್ಯಾಜ್ಯ ಸಂಸ್ಕರಣಾ ವೆಚ್ಚ | ರೂ. 6,11,01,000.00 |
| 5 | ಪ್ರತಿದಿನ 600 ಮೆ.ಟನ್ ಗಳಂತೆ 20 ವರ್ಷಗಳಿಗೆ ಘನತ್ಯಾಜ್ಯ ಸಂಸ್ಕರಣಾ ವೆಚ್ಚ (3 ವರ್ಷಗಳಿಗೊಮ್ಮೆ ಶೇ. 10 ರಷ್ಟು ಏರಿಕೆ) | ರೂ. 157,02,95,700.00 |

ಸದರಿ ಟೆಂಡರನ್ನು 20 ವರ್ಷಗಳ ಅವಧಿಗೆ ಕರೆಯಲಾಗಿದ್ದು, ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ರವರು ನಮೂದಿಸಿರುವ ದರವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ.10 ರಷ್ಟು ಹೆಚ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ ವರ್ಷವಾರು ಪಾವತಿಸಬೇಕಾಗಿರುವ ಮೊತ್ತದ ವಿವರವು ಕೆಳಕಂಡಂತಿರುತ್ತದೆ.

| Sl No | Particulars | Amount in Rs | Cumulative amount in Rs |
|---|---|---|---|
| 1 | 1st Year | 6,11,01,000 | 6,11,01,000 |
| 2 | 2nd Year | 6,11,01,000 | 12,22,02,000 |
| 3 | 3rd Year | 6,11,01,000 | 18,33,03,000 |

S Shekhar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

17

| | | | |
|---|---|---|---|
| 4 | 4th Year | 6,72,11,100 | 25,05,14,100 |
| 5 | 5th Year | 6,72,11,100 | 31,77,25,200 |
| 6 | 6th Year | 6,72,11,100 | 38,49,36,300 |
| 7 | 7th Year | 7,33,21,200 | 45,82,57,500 |
| 8 | 8th Year | 7,33,21,200 | 53,15,78,700 |
| 9 | 9th Year | 7,33,21,200 | 60,48,99,900 |
| 10 | 10th Year | 7,94,31,300 | 68,43,31,200 |
| 11 | 11th Year | 7,94,31,300 | 76,37,62,500 |
| 12 | 12th Year | 7,94,31,300 | 84,31,93,800 |
| 13 | 13th Year | 8,55,41,400 | 92,87,35,200 |
| 14 | 14th Year | 8,55,41,400 | 1,01,42,76,600 |
| 15 | 15th Year | 8,55,41,400 | 1,09,98,18,000 |
| 16 | 16th Year | 9,16,51,500 | 1,19,14,69,500 |
| 17 | 17th Year | 9,16,51,500 | 1,28,31,21,000 |
| 18 | 18th Year | 9,16,51,500 | 1,37,47,72,500 |
| 19 | 19th Year | 9,77,61,600 | 1,47,25,34,100 |
| 20 | 20th Year | 9,77,61,600 | **1,57,02,95,700** |

ಇವರು ಸ್ಥಾಪಿಸುವ ಘಟಕಕ್ಕೆ ಘನತ್ಯಾಜ್ಯವನ್ನು ಒದಗಿಸುವ ಜವಾಬ್ದಾರಿ ಪಾಲಿಕೆಯದ್ದಾಗಿರುತ್ತದೆ ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪಾಲಿಕೆ ವತಿಯಿಂದಲೇ ಭರಿಸಬೇಕಾಗಿದೆ.

ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಯವರು ಸ್ಥಾಪಿಸಬೇಕಿರುವ ಘಟಕದಲ್ಲಿ ಈ ಕೆಳಕಂಡಂತೆ ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ.

1. ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಗಳ ರೀತ್ಯ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸುವ ನಿಯಮಾವಳಿಗಳ ರೀತ್ಯ ಘನತ್ಯಾಜ್ಯವನ್ನು ಸಂಸ್ಕರಣೆ ಮತ್ತು / ಅಥವಾ ನಿರ್ವಹಣೆ ಮಾಡಬೇಕಾಗಿರುತ್ತದೆ.
2. ಲ್ಯಾಂಡ್‌ಫಿಲ್‌ನಲ್ಲಿ ತುಂಬುವ Inerts ನ ಪ್ರಮಾಣವು ಶೇ. 15 ಕ್ಕೆ ಮೀರಬಾರದು.
3. ವಾಸನೆ, ಲೀಚೆಟ್ ಹಾಗೂ ಇದರಿಂದಾಗಿ ನೊಣ, ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಸೂಕ್ತಕ್ರಮ ಕೈಗೊಳ್ಳುವುದು ಮತ್ತು Closed shed ನಲ್ಲಿ ನಿರ್ವಹಣೆ ಮಾಡುವುದು.
4. ತ್ಯಾಜ್ಯ ಸಂಸ್ಕರಣೆಯು ತೃಪ್ತಿಕರವಾಗಿರದಿದ್ದಲ್ಲಿ ಸೂಕ್ತ ದಂಡ ವಿಧಿಸುವುದು.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಪಾಲಿಕೆಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ

1. ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಿ, ಯಶಸ್ವಿ ಬಿಡ್ಡುದಾರರಾದ ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಯವರಿಗೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಕನ್ನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 85ರ 20.00 (ಎಕರೆ-ಗುಂಟೆ) ಪಾಲಿಕೆ ಜಾಗದಲ್ಲಿ ಪ್ರತಿದಿನ 600 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣೆ / ನಿರ್ವಹಣೆ ಘಟಕವನ್ನು ಸ್ಥಾಪಿಸಿ 20 ವರ್ಷಗಳ ಅವಧಿಗೆ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ.
2. ಟೆಂಡರ್‌ನಲ್ಲಿ ಭಾಗವಹಿಸಿ ಕಡಿಮೆ ದರ ನಮೂದಿಸಿ ಯಶಸ್ವಿ ಬಿಡ್ಡುದಾರರಾಗಿರುವ ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಗೆ ಪಾಲಿಕೆಯಿಂದ ಪ್ರತಿದಿನ 600 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಿ ಒದಗಿಸಲು ಅನುಮೋದನೆ.

[illegible signature] 18

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ [illegible]
ಬೃಹತ್ ಬೆಂಗಳೂರು ಮಹಾನಗರ [illegible]
ಬೆಂಗಳೂರು

3. ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಗೆ ಪಾಲಿಕೆಯಿಂದ ಒದಗಿಸುವ ಪ್ರತಿ ಮೆ.ಟನ್ ಘನತ್ಯಾಜ್ಯಕ್ಕೆ ರೂ. 279.00 ಗಳ ಸಂಸ್ಕರಣಾ ಶುಲ್ಕವನ್ನು (Tipping fee) ಪಾವತಿಸಲು ಅನುಮೋದನೆ.
4. ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಗೆ ಪಾವತಿಸುವ ಸಂಸ್ಕರಣಾ ಶುಲ್ಕವನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಶೇ.10 ರಷ್ಟು ಹೆಚ್ಚಿಸಿ ತಃಖ್ತೆಯಲ್ಲಿರುವಂತೆ ಒಟ್ಟಾರೆ 20 ವರ್ಷಗಳ ಅವಧಿಗೆ ಪಾವತಿಸಲು ಅನುಮೋದನೆ.

**ನಿರ್ಣಯ:-** ಆಯುಕ್ತರ ದಿ 26-9-13ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

S Shashikala

(ಎಸ್. ಶಶಿರೇಖಾ ಜಯರಾಮ್)
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ

ಪ್ರತಿಯನ್ನು :

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3. ಆಡಳಿತ ಪಕ್ಷ/ವಿರೋಧ ಪಕ್ಷ ಮತ್ತು ಜೆ.ಡಿ.ಎಸ್. ಪಕ್ಷದ ನಾಯಕರುಗಳ ಆಪ್ತ ಸಹಾಕರುಗಳಿಗೆ ಕಳುಹಿಸುತ್ತಾ ಮಾನ್ಯ ನಾಯಕರುಗಳ ಅವಗಾನೆಗೆ ತರಲು ಕೋರಿದೆ.
4. ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಕಳುಹಿಸಿದೆ.
5. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿದೆ.
7. ಕಛೇರಿ ಕಡತಕ್ಕೆ.